# ಕಾಶಿಯಲ್ಲಿನ ಕನ್ನಡತಾಣ ಜಂಗಮವಾಡಿ ಮಠ

**ಕಾಶಿಯಲ್ಲಿನ ಜಂಗಮವಾಡಿ ಮಠ ಕನ್ನಡದ ಕಂಪನ್ನುಳ್ಳ ಪ್ರದೇಶ. ಅನೇಕ ಮಹರ್ಷಿಗಳು ತಪಸ್ಸನ್ನಾಚರಿಸಿದ್ದಾರೆ ಎನ್ನಲಾದ ಈ ಸ್ಥಳದಲ್ಲಿ, ಶತಮಾನೋತ್ಸವ ದಾಟಿ ಮುನ್ನಡೆದಿರುವ ಗುರುಕುಲವೂ ಇದೆ.**

**■ ಡಿ.ಜಿ. ಮಲ್ಲಿಕಾರ್ಜುನ**




ಕಾಶಿಯಲ್ಲಿನ ಜಂಗಮವಾಡಿ ರಸ್ತೆಯಲ್ಲಿ ಹೋಗುವಾಗ ನಮ್ಮ ಕಿವಿಗೆ ಕನ್ನಡದ ಮಾತುಗಳು ಕೇಳಿಬರುತ್ತಿದ್ದಂತೆಯೇ ರೋಮಾಂಚನವಾಗುತ್ತದೆ. ಉತ್ತರ ಕರ್ನಾಟಕದ ಮಂದಿ ಗುಂಪುಗುಂಪಾಗಿ ಗಲಗಲನೆ ಕನ್ನಡದಲ್ಲಿ ಮಾತನಾಡುತ್ತಿರುತ್ತಾರೆ. ಬಲಕ್ಕೆ ತಿರುಗಿ ನೋಡಿದರೆ, ಅಚ್ಚ ಕನ್ನಡದಲ್ಲಿ 'ಜಂಗಮವಾಡಿ ಮಠ' ಎಂದು ದೊಡ್ಡದಾದ ಫಲಕ ಕಂಡೊಡನೆಯೇ ಕಾಶಿಯಲ್ಲಿ ಕರ್ನಾಟಕವನ್ನು ಕಂಡಂತಾಗುತ್ತದೆ.

ಪಂಚಪೀಠಗಳು ವೀರಶೈವ ಧರ್ಮದ ಸನಾತನ ಪೀಠಗಳು. ಅವುಗಳಲ್ಲಿ ಒಂದಾದ, 'ಜ್ಞಾನ ಸಿಂಹಾಸನ'ವೆಂದು ಕರೆಯಲಾಗುವ ಕಾಶಿಪೀಠವು ಜಂಗಮವಾಡಿ ಮಠದಲ್ಲಿದೆ. ಕಾಶಿಯಲ್ಲಿರುವ ಮಠಗಳಲ್ಲಿ ವೀರಶೈವ ಧರ್ಮದ ಈ ಜಂಗಮವಾಡಿ ಮಠ ಕ್ರಿ.ಶ. 6ನೇ ಶತಮಾನಕ್ಕಿಂತಲೂ ಹಳೆಯದು.

ಮಹಾಶಿವರಾತ್ರಿಯು ಈ ಪೀಠದ ಮೂಲ ಸಂಸ್ಥಾಪಕರಾದ ಶ್ರೀ ಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರ ಅವತಾರದ ದಿನ ಎಂಬ ನಂಬಿಕೆಯಿಂದ ಆ ದಿನ ಸಹಸ್ರಾರು ಜನರು ಇಲ್ಲಿಗೆ ಬರುತ್ತಾರೆ. ಪರಶಿವನ ಅಪ್ಪಣೆಯಂತೆ ಭೂಲೋಕದಲ್ಲಿ ವೀರಶೈವ ಧರ್ಮವನ್ನು ಪ್ರತಿಷ್ಠಾಪಿಸುವುದಕ್ಕಾಗಿ ಜಗದ್ಗುರು ಪಂಚಾಚಾರ್ಯರಲ್ಲೊಬ್ಬರಾದ ಶ್ರೀ ಜಗದ್ಗುರು ವಿಶ್ವಾರಾಧ್ಯ ಭಗವತ್ಪಾದರು ಅವತರಿಸಿದರು ಎಂಬುದಾಗಿ ವೀರಶೈವರು ನಂಬುತ್ತಾರೆ.

ಸುಪ್ರಸಿದ್ಧವಾದ ಕಾಶೀಖಂಡದಲ್ಲಿ ಈ ಸ್ಥಳವು ಹರಿಕೇಶ ನಂದನವನವೆಂದು ಕರೆಸಿಕೊಂಡಿದೆ. ಪ್ರಾಚೀನ ಕಾಲದಲ್ಲಿ ಅನೇಕ ಮಹರ್ಷಿಗಳು ಈ ಸ್ಥಾನದಲ್ಲಿ ತಪಸ್ಸನ್ನಾಚರಿಸಿ ಅಂತ್ಯಕಾಲದಲ್ಲಿ ತಮ್ಮ ಹೆಸರಿನ ಶಿವಲಿಂಗಗಳನ್ನು ಸಂಸ್ಥಾಪಿಸಿದ್ದಾರೆಂಬ ನಂಬಿಕೆಯಿಂದ, ಅನೇಕ ಯಾತ್ರಾರ್ಥಿಗಳು ತಮ್ಮತಮ್ಮ ಪೂರ್ವಜರ ಸ್ಮೃತಿಗಾಗಿ ಶಿವಲಿಂಗಗಳನ್ನು ಸಂಸ್ಥಾಪಿಸುತ್ತ ಬಂದಿದ್ದಾರೆ. ಹಾಗಾಗಿ ಲಕ್ಷಾಂತರ ಲಿಂಗಗಳಿರುವ ಈ ಜಂಗಮವಾಡಿ ಮಠವು ಶಿವಲಿಂಗಮಯವಾಗಿ ಕಂಗೊಳಿಸುತ್ತದೆ.

## ಕೊಡಗಿನ ರಾಜನ ಸ್ಮರಣೆ

ಜಂಗಮವಾಡಿ ಮಠದಲ್ಲಿ ಕೊಡಗಿನ ಹಾಲೇರಿ ವಂಶದ ಕೊನೆಯ ರಾಜ ಚಿಕ್ಕವೀರ ರಾಜೇಂದ್ರ, ಆತನ ಮೂವರು ಹೆಂಡತಿಯರು ಮತ್ತು ಮಗನ